ಸಂತಸದಿಂದ ಎದುರು ನೋಡುತ್ತಿದ್ದ ಆತ, ಈಗ ಮತ್ತೆ ಅವರಿಬ್ಬರೂ ಒಂದಾಗಿದ್ದಾರೆಂಬ ಗುಲ್ಲನ್ನು ಜೀರ್ಣಿಸಿಕೊಳ್ಳಲಾಗದೇ, ಆಕಾಶದಲ್ಲಿ ನಕ್ಷತ್ರಗಳನ್ನು ಎಣಿಸುತ್ತಾ, ಟೈಟಾನಿಕ್ ಹಡಗು ಭಾರತದ ಕಡಲಿಗೆ ಎಂದು ಬಂದು ತಲುಪುತ್ತದೆಯೆಂದು ವಿರಹ ಗೀತೆಗಳನ್ನು ಗುನುಗುನಿಸುತ್ತಾ ತನ್ನ ಮನೆಯ ತಾರಸಿಯಲ್ಲಿ ಶೋಕತಪ್ತನಾಗಿ ಬಿದ್ದಿದ್ದಾನೆ.

ನಂಬರ್ ಒಂದು: ಪ್ರಾಸ ರಹಿತ ಒಂದಷ್ಟು ಶೋಕ ಗೀತೆ ರಚಿಸಿ ಹಾಡುತ್ತಾ ಕಾಲೇಜ್ ಕ್ಯಾಂಪಸ್‌ನಲ್ಲಿ ಅಲೆದಾಡುತ್ತಿರುವ ಅವನ ಹೃದಯಕ್ಕೆ ಅದು ಹೇಗೋ ದುಃಖವೇ ಮೈವೆತ್ತಂತೆ ಕಾಣುವ ಎಲೆಕ್ಟ್ರಾನಿಕ್ ಡಿಪಾರ್ಟ್‌ಮೆಂಟಿನ ಈ ಮೇಡಂ ಮೇಲೆ ಕ್ರಷ್ ಉಂಟಾಗಿ, ಅವರನ್ನು ನೋಡಿದಾಗೆಲ್ಲಾ ವಿಪರೀತ ಸೆಳೆತ ಹುಟ್ಟಿ, ಅವನರಿವಿಲ್ಲದಂತೆ ಅವನ ನಾಡಿ ಮಿಡಿತದ ಲೆಕ್ಕ ತಪ್ಪುತ್ತಿದೆ. ಅದು ಪ್ರೀತಿಯೇ, ಮೋಹವೇ, ಸೆಳೆತವೇ ಅಥವಾ ಬರೀ ಅನುಕಂಪವೇ ನಿರ್ಧರಿಸಲಾಗದೇ, ಅಕ್ಷರಗಳ ನಡುವೆ ಕಂಡ ಅವರ ಅಪರಿಮಿತ ನೋವಿನ ಮುಖವನ್ನೇ ತಲೆಯಲ್ಲಿ ಹೊತ್ತು ಪರೀಕ್ಷೆಗಳಲ್ಲಿ ಡುಮುಕಿ ಹೊಡೆಯುತ್ತಿದ್ದಾನೆ.

ತಾರಸಿಯಲ್ಲಿ ಬಿದ್ದಿರುವ ಈ ಭಗ್ನ ಪ್ರಣಯಿಯನ್ನು ಕಂಡು ಮಮ್ಮಲ ಮರಗಿರುವ ಹದಿಹರೆಯದ ಅವನ ಸಹಪಾಠಿ ಗೆಳತಿಯೊಬ್ಬಳು, ಕೋರ್ಸ್ ಮುಗಿಯುತ್ತಿದ್ದಂತೇ ಪಾಸ್‌ಪೋರ್ಟ್, ವೀಸಾ ಎಂದು ಮುಂದೆ ಓದಲು ಅಮೆರಿಕಾಕ್ಕೆ ಹಾರಿ ಹೋದರೂ, ಅವನ ನೆನಪಿನಿಂದ ಹೊರ ಬರಲಾರದೇ ಹೊಯ್ದಾಡುತ್ತಲೇ ಆರು ತಿಂಗಳು ಕಳೆದವಳು, ಸದ್ಯಕ್ಕೆ ಕ್ರಿಸ್ಮಸ್ ವೆಕೇಷನ್‌ಗೆ ಸ್ವದೇಶಕ್ಕೆ, ತನ್ನೂರಿಗೆ ಬಂದಿದ್ದಾಳೆ. ಹೇಗಾದರೂ ಮಾಡಿ ಅವನನ್ನೂ ಅಮೆರಿಕಾಕ್ಕೆ ಹಾರಿಸಿಕೊಂಡು ಹೋಗಿ, ಒಂದು ಸುಂದರ ಬದುಕನ್ನು ಕಟ್ಟಿಕೊಳ್ಳುವ ಹಗಲುಗನಸು ಕಾಣುತ್ತಿರುವ ಆಕೆಗೆ, ಸದ್ಯಕ್ಕೆ ಹದಗೆಟ್ಟ ಆ ತಪ್ತ ಹೃದಯವನ್ನು ಹದ್ದುಬಸ್ತಿಗೆ ತರುವುದು ಹೇಗೆಂದು ತಿಳಿಯದೇ ಚಿಂತಾಕ್ರಾಂತಳಾಗಿ, ಕಡಲ ಉಪ್ಪು ಗಾಳಿಯನ್ನೇ ಹೀರುತ್ತಾ ಎಲಿಯಟ್ ಬೀಚಿನ ಆ ಮೂಲೆಯಲ್ಲಿ ಒಂಟಿಯಾಗಿ ಕುಳಿತಿದ್ದಾಳೆ.

ಆ ಹುಡುಗಿಗೆ ಹೆತ್ತವರು ಎಂದೋ ಸೋದರಿಕೆಯಲ್ಲೇ ಸಂಬಂಧ ನೋಡಿಯಾಗಿದೆ ಮತ್ತು ಮದರಾಸಿನ ಮತ್ತೊಂದು ಮೂಲೆಯಲ್ಲಿ ನೆಲೆಸಿರುವ ಆ ಹುಡುಗ ತನ್ನ ಬಾಲ್ಯ ಸಖಿಯನ್ನೇ ನಂಬಿ ಚಾತಕ ಪಕ್ಷಿಯಂತೆ ಅಮೆರಿಕಾದಿಂದ ಚಾಚೂ ತಪ್ಪದೇ ಹಿಂತಿರುಗಿ ಬರಬಹುದಾದ ಆ ಹುಡುಗಿಯ ನಿರೀಕ್ಷೆಯಲ್ಲಿ, ಬೆಂದ ತರಕಾರಿ ಪಾತ್ರೆಯಲ್ಲಿ ಸುಮ್ಮನೇ ಕೊತಕೊತ ಕುದಿಯುವಂತೆ ದಿನವೂ ಉರಿದುರಿದು ನಿಟ್ಟಿಸುರಿಡುತ್ತಾ ಸುಣ್ಣವಾಗುತ್ತಿದ್ದಾನೆ. ಸದ್ಯ ಅವಳು ಊರಿಗೆ ಬಂದಿರುವ ವಿಷಯವನ್ನು ಅವಳ ಮನೆಯವರು ಮುಚ್ಚಿಟ್ಟಿದ್ದಾರೆ. ಏಕೆಂದರೆ, ಅಮೆರಿಕಾಕ್ಕೆ ಹೋಗುವ ಮೊದಲೇ ಅವನನ್ನು ಮಾತ್ರ ತಾನೆಂದೂ ಮದುವೆಯಾಗುವುದಿಲ್ಲವೆಂದು ಮನೆಯವರೆದುರು ಅವಳು ಸ್ಪಷ್ಟಪಡಿಸಿಯಾಗಿದೆ.

ಇಷ್ಟು ವರುಷವೂ ಕಾಡಿರದ ಅವಳ ಕಲ್ಯಾಣವೊಂದು ಈಗ ದಿಢೀರೆಂದು ಉದ್ಭವಿಸಿರುವುದರಿಂದ ವಯಸ್ಸಾದ ಪ್ರೊಫೆಸರ್ ದಂಪತಿಗೆ ಎಲ್ಲಿಲ್ಲದ ತಲೆಬಿಸಿ ಶುರುವಾಗಿದೆ. ಅವಳನ್ನು ಹೆತ್ತಿದ್ದಕ್ಕೆ, ಒಂದು ಒಳ್ಳೆ ಗಂಡನ್ನು ಹುಡುಕಿ ಕೊಟ್ಟರೆ ಪಿಳ್ಳೆಯಾರ್‌ಗೆ ಜೋಡು ತೆಂಗಿನಕಾಯಿ ಒಡೆಸುತ್ತೇನೆಂದು ಹರಕೆ ಹೊತ್ತು, 'ಅಂಡವಾ', 'ಮುರುಗಾ' ಎಂದು ಕಂಡರಿಯದ ದೇವರಿಗೆಲ್ಲಾ ಮೊರೆಯಿಡುತ್ತಿರುವ ವೃದ್ಧರು, ಹೊದಿಕೆ ಸರಿಸಿ, ಕಂಪ್ಯೂಟರ್ ತೆರೆದು ಇದ್ದಬದ್ದ ಮ್ಯಾಟ್ರಿಮೋನಿಯನ್ನೆಲ್ಲಾ ತಡಕಾಡುತ್ತಿದ್ದಾರೆ.

ಮುಸ್ಸಂಜೆ. ಸೂರ್ಯ, ಎತ್ತಲೋ ಇರುವ ಪಶ್ಚಿಮದಲ್ಲಿ ಮುಳುಗುತ್ತಿರುವ ಕುರುಹಾಗಿ,